ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 10 ಏಪ್ರಿಲ್ – ಜೂನ್ 2024 ಸಂಚಿಕೆ: 1

## ಕೃಷಿ ಪರಿಕರಗಳ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೋಮಾ ಪದವಿ ಪ್ರಮಾಣ ಪತ್ರಗಳ ವಿತರಣಾ ಕಾರ್ಯಕ್ರಮ

ದಿನಾಂಕ: 29.05.2024 ರಂದು ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರಿನಲ್ಲಿ 5ನೇ ಹಾಗೂ 6ನೇ ತಂಡಕ್ಕೆ ಕೃಷಿ ಪರಿಕರಗಳ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೋಮಾ ಪದವಿ ಪ್ರಮಾಣ ಪತ್ರಗಳ ವಿತರಣಾ ಸಮಾರಂಭ ಹಾಗೂ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕೃಷಿ ಸಮುದಾಯಕ್ಕೆ ನಿಕಟ ಸಂಪರ್ಕದಲ್ಲಿರುವ ಕೃಷಿ ಪರಿಕರ ಮಾರಾಟಗಾರರಿಗೆ ವೈಜ್ಞಾನಿಕ ಕೃಷಿ ತಂತ್ರಜ್ಞಾನ, ನೂತನತಾಂತ್ರಿಕ ಮಾಹಿತಿ, ಕೃಷಿ ಸಂಬಂಧಿತ ಮಾಹಿತಿಯ ಬಗ್ಗೆ ತರಬೇತಿ, ಪ್ರಾತ್ಯಕ್ಷಿಕೆ, ಶೈಕ್ಷಣಿಕ ಪ್ರವಾಸಗಳ ಮೂಲಕ ಅಧ್ಯಯನವನ್ನು ಒಂದು ವರ್ಷ ಅವಧಿಯ ಡಿಪ್ಲೋಮಾ (DAESI) ತರಬೇತಿಯನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ನೀಡಲಾಗಿತ್ತು.







ಈ ಕಾರ್ಯಕ್ರಮವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶರಾದ ಡಾ. ವಿ.ಎಲ್. ಮಧುಪ್ರಸಾದ್ ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರಮಾಣ ಪತ್ರ ತಮಗೆ ಒಂದು ದೊಡ್ಡ ಆಸ್ತಿ. ಇದು ತಮ್ಮ ವ್ಯವಹಾರಿಕ ಜೀವನದಲ್ಲಿ ಉತ್ತಮ ರೀತಿಯಲ್ಲಿ ಉಪಯೋಗವಾಗಲಿ. ಈ ದೇಸಿ ಡಿಪ್ಲೋಮಾ ಕೋರ್ಸ್‌ನಿಂದ ಕೃಷಿ ಕುರಿತು ಪಡೆದ ವೈಜ್ಞಾನಿಕ, ತಂತ್ರಜ್ಞಾನ ಮಾಹಿತಿಯಿಂದ ಕೆವಿಕೆ ಮತ್ತು ಕೃಷಿ ಇಲಾಖೆಗಳ ಜೊತೆಗೂಡಿ ರೈತರ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಭಾಗಿಯಾಗಿ ಎಂದು ತಿಳಿಸಿದರು.

ದೇಸಿ ಕಾರ್ಯಕ್ರಮದ ರಾಜ್ಯ ನೋಡಲ್ ಅಧಿಕಾರಿಗಳಾದ ಡಾ. ನಾರಾಯಣಸ್ವಾಮಿ ರವರು ಮಾತನಾಡುತ್ತ ಈ ದೇಸಿ ಡಿಪ್ಲೋಮಾಕೋರ್ಸ್‌ನಿಂದ ಕೃಷಿ ಪರಿಕರ ಮಾರಾಟಗಾರರಿಗೆ ಮತ್ತು ಕೃಷಿ ವಿಜ್ಞಾನಕೇಂದ್ರದ ನಡುವೆಉತ್ತಮ ಸಂಪರ್ಕದ ಸೇತುವೆ ನಿರ್ಮಾಣವಾಗಿದೆ.ತರಬೇತಿಯಲ್ಲಿ ಪಡೆದ ಮಾಹಿತಿಯಿಂದರೈತರ ಸಮಸ್ಯೆಗೆ ಪರಿಹಾರ ನೀಡಲು ಮತ್ತುರೈತರ ಸೇವೆಯಲ್ಲಿ ತೊಡಗಿಸಿಕೊಳ್ಳಲು ಸಹಾಯವಾಗಲಿದೆಎಂದು ತಿಳಿಸಿದರು ಶ್ರೀಮತಿ. ಸವಿತಾ, ಕೃಷಿ ಅಧಿಕಾರಿಗಳು, ಇವರು ಮಾತನಾಡಿ ಹಿಂದೆ ಕೃಷಿ ಪರಿಕರ ಮಾರಾಟಗಾರರು ಕೃಷಿಯ ತಿಳುವಳಿಕೆಯಿಲ್ಲದೆ 3–4 ಕೀಟನಾಶಕಗಳ / ರೋಗನಾಶಕಗಳನ್ನು ರೈತರಿಗೆ ನೀಡಿ, ಉತ್ಪಾದನಾ ವೆಚ್ಚ ಜಾಸ್ತಿ ಮಾಡುತ್ತಿದ್ದರು. ಆದರೆ ಈ ಡಿಪ್ಲಮೋ ಕೋರ್ಸ್‌ನಿಂದ ಕೃಷಿಯ ಪೂರ್ಣ ಜ್ಞಾನ ಪಡೆದು ರೈತರಿಗೆ ನಿರ್ದಿಷ್ಟವಾದ ರೋಗನಾಶಕ / ಕೀಟನಾಶಕಗಳನ್ನು ಕೊಟ್ಟು ರೈತರ ಖರ್ಚು ಕಡಿಮೆ ಮಾಡುತ್ತಿದ್ದಾರೆ. ಹಾಗೂ ರೈತರಿಗೆ ಸಮಗ್ರ ಮಾಹಿತಿ ನೀಡಿ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದರು.

ದೇಸಿ ಕೋರ್ಸ್‌ನ ಸಂಯೋಜಕರು ಹಾಗೂ ವಿಸ್ತರಣಾ ವಿಜ್ಞಾನಿಯಾದ ಶ್ರೀ. ದರ್ಶನ್ ಮಾತನಾಡಿ ಭಾರತದಲ್ಲಿ ಕೃಷಿ ಸಮುದಾಯಕ್ಕೆ ಕೂಡಲೇ ಸಿಗುವ ಮಾರ್ಗದರ್ಶಿಗಳೆಂದರೆ ಕೃಷಿ ಪರಿಕರ ಮಾರಾಟಗಾರರು ಆದರೆ ಬಹಳಷ್ಟು ಜನಕ್ಕೆ ಕೃಷಿ ಪ್ರಾಕಾರದಲ್ಲಿ ಪರಿಣಿತಿಯನ್ನು ಹೊಂದಿರುವುದಾಗಲೀ ಅಥವಾ ಅಧ್ಯಯನ ಮಾಡುವುದಾಗಲೀ ಇರುವುದಿಲ್ಲ. ಈ ಒಂದು ದೇಸಿ ಕೋರ್ಸ್ ಅವರಿಗೆ ತರಬೇತಿಯನ್ನು ಒದಗಿಸಿ, ಜ್ಞಾನದ ಮಟ್ಟವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪ್ರಸ್ತುತ ಈ ದೇಸಿ ತಂಡದವರು ತಾವು ಪಡೆದ ಜ್ಞಾನ ತಮ್ಮ ವ್ಯಾಪಾರದ ಜೊತೆಗೆ ರೈತರ ಸರ್ವತೋಮುಖ ಅಭಿವೃದ್ಧಿಗೆ ಉಪಯೋಗಿಸಿ ಎಂದು ಕರೆ ಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆ.ವಿ.ಕೆ.ಯ ಡಾ॥ ಗೋವಿಂದ ಗೌಡ ವಿ., ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹಳ್ಳಿ ಮಟ್ಟದಲ್ಲಿರುವ ಕೃಷಿ ಪರಿಕರ ಮಾರಾಟಗಾರರು ತಳ ಮಟ್ಟದ ವಿಸ್ತರಣಾ ಕಾರ್ಯಕರ್ತರಾಗಿದ್ದು ಮುಂದಿನ ದಿನಗಳಲ್ಲಿ ಸರ್ಕಾರದ ಮಟ್ಟದಲ್ಲಿ ಅವರಿಗೆ ವಿಸ್ತರಣಾ ಕಾರ್ಯಗಳಲ್ಲಿ ರೈತರ ಜೊತೆಗೂಡಿ ಕಾರ್ಯಕ್ರಮ ಮಾಡಲು ಹೆಚ್ಚಿನ ಪ್ರಾತಿನಿಧ್ಯ ದೊರಕಲಿದ್ದು ನೀವುಗಳು ಸೇವಾ ಮನೋಭಾವ ಬೆಳೆಸಿಕೊಂಡು ಉತ್ತಮ ಕೃಷಿ ವಿಸ್ತರಣಾ ಕಾರ್ಯಕರ್ತರಾಗಿ ರೂಪುಗೊಳ್ಳಬೇಕೆಂದು ಕರೆ ನೀಡಿದರು ಹಾಗೂ ಕೆ.ವಿ.ಕೆ.ಯ ಎಲ್ಲ ಕೃಷಿ ವಿಜ್ಞಾನಿಗಳ ಜೊತೆ ಸತತ ಸಂಪರ್ಕದಲ್ಲಿದ್ದು ಉತ್ತಮ ಸಲಹೆ ಸೂಚನೆಗಳನ್ನು ರೈತರಿಗೆ ತಲುಪಿಸಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಕೆ.ವಿ.ಕೆ.ಯ ವಿಜ್ಞಾನಿಗಳಾದ ಡ. ಶಿವಪ್ಪನಾಯಕ ಹೆಚ್.ಬಿ., ಡಾ. ನಿತ್ಯಶ್ರೀ, ಶ್ರೀ. ಮನೋಜ್., ಡಾ. ಕೀರ್ತಿಶಂಕರ್, ಡಾ. ಸತೀಶ, ಕೃಷಿ ಅಧೀಕ್ಷಕರಾದ ಡಾ. ಯೋಗೀಶ್ ಹಾಗೂ ದೇಸಿ ಡಿಪ್ಲಮೊ ಕೋರ್ಸ್‌ನ ಅನುವುಗಾರರಾದ ಶ್ರೀಧರಮೂರ್ತಿ ಹಾಜರಿದ್ದರು.

## ವಿಶ್ವ ಪರಿಸರ ದಿನ–2024

ಕೃಷಿ ವಿಜ್ಞಾನ ಕೇಂದ್ರ, ಬಿದರೆಗುಡಿಕಾವಲು, ಕೊನೇಹಳ್ಳಿ, ತಿಪಟೂರು ಇಲ್ಲಿ ದಿನಾಂಕ: 05.06.2024ರಂದು "ವಿಶ್ವ ಪರಿಸರ ದಿನ–2024–"ನ್ನು ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ತಿಪಟೂರಿನ ವಲಯ ಅರಣ್ಯಾಧಿಕಾರಿಗಳಾದ ಶ್ರೀ ಲಕ್ಷ್ಮೀನಾರಾಯಣರವರು ಉದ್ಘಾಟಿಸಿದರು. ಪ್ರತಿ ವರ್ಷ ಜೂನ್–5 ರಂದು ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ಪರಿಸರ ದಿನವನ್ನು ಆಚರಿಸುತ್ತಿದ್ದು ಈ ವರ್ಷ ಭೂಮಿ ಪುನರ್‌ಸ್ಥಾಪನೆ, ಮರು ಭೂಮೀಕರಣ ಮತ್ತು ಬರಸ್ಥಿತಿ ಸ್ಥಾಪಕತ್ವ ಎಂಬ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.




ಶೆಟ್ಟಿಕೆರೆ ಗ್ರಾಮದ ರೈತರಾದ ಶ್ರೀಯುತ ಅರುಣ್‌ರವರು ಮಾತನಾಡಿ, ಮನುಷ್ಯನಿಗೆ ಪರಿಸರವೇ ಸರ್ವಸ್ವ ಮಣ್ಣು ಮತ್ತು ಪರಿಸರವನ್ನು ಮುಂದಿನ ಪೀಳಿಗೆಗೆ ಕಾಪಾಡುವುದು ಅಗತ್ಯವೆಂದು ತಿಳಿಸಿದರು, ಮರ ಆಧಾರಿತ ಬೇಸಾಯದಿಂದ ಕಡಿಮೆ ಶ್ರಮ, ಕಡಿಮೆ ನೀರು ಉತ್ತಮ ಆದಾಯದ ಜೊತೆಗೆ ನಮ್ಮ ಪರಿಸರವನ್ನು ಕಾಪಾಡಿಕೊಳ್ಳಬಹುದು ಎಂದು ತಮ್ಮ ಅರಣ್ಯ ಬೇಸಾಯದ ಅನುಭವವನ್ನು ಹಂಚಿಕೊಂಡರು. ನಾಗೇಶ್ ಉಪ ವಲಯ ಅರಣ್ಯಾಧಿಕಾರಿಗಳು ತಿಪಟೂರು ಇವರು ಮಾತನಾಡಿ ಸಾಮಾಜಿಕ ಅರಣ್ಯ ಇಲಾಖೆಯಿಂದ ರೈತರಿಗೆ ಸಿಗುವ ವಿವಿಧ ಸೌಲಭ್ಯ ಮತ್ತು ಯೋಜನೆಗಳ ಬಗ್ಗೆ ವಿವರಣೆ ನೀಡಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ, ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ಇಲ್ಲಿನ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಗೊವಿಂದ ಗೌಡ.ವಿ ಇವರು ಮಾತನಾಡಿ ಕಾಡು ಕಡಿದು ನಾಡು ಮಾಡಿದ್ದಾಯ್ತು, ಈಗ ಕಾಡು ಕಟ್ಟುವ ಸಮಯ ಎಂದು ರೈತರಿಗೆ ಕರೆ ಕೊಟ್ಟರು. ಅರಣ್ಯ ಬೆಳೆಗಳನ್ನು ಬೆಳೆಯಲು ಕಡಿಮೆ ನೀರು ಮತ್ತು ಕಡಿಮೆ ಶ್ರಮ ಮಾತ್ರ ಬೇಕಾಗಿದ್ದು ರೈತರು ಅರಣ್ಯ ಬೆಳೆಗಳನ್ನು ಬೆಳೆಯಲು ಸರ್ಕಾರದ ಹಲವು ಯೊಜನೆಗಳನ್ನು ಉಪಯೋಗಿಸಿಕೊಂಡರೆ ಉತ್ತಮ ಲಾಭದ ಜೊತೆಗೆ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಕೊಡುಗೆಯಾಗಿ ನೀಡಬಹುದೆಂದು ತಿಳಿಸಿದರು. ಈ ಸಂದರ್ಭದಲ್ಲಿ ಕೆ.ವಿ.ಕೆಯ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ತಮ್ಮ ಆದಾಯವನ್ನು ದ್ವಿಗುಣ ಮಾಡಿಕೊಂಡಿರುವ ಆಯ್ದ ಹದಿನೈದು ರೈತರಿಗೆ ಸನ್ಮಾನಿಸಲಾಯಿತು ಮತ್ತು 50ಕ್ಕೂ ಹೆಚ್ಚು ರೈತರಿಗೆ ಶ್ರೀಗಂಧ, ಮಹಾಗನಿ ಮತ್ತು ತೇಗದ ಸಸಿಗಳನ್ನು ವಿತರಿಸಲಾಯಿತು ಮತ್ತು ಕೆ.ವಿ.ಕೆ ಆವರಣದಲ್ಲಿ 100ಕ್ಕೂ ಹೆಚ್ಚು ಅರಣ್ಯ ಸಸಿಗಳನ್ನು ನೆಡಲಾಯಿತು. ಈ ಕಾರ್ಯಕ್ರಮದಲ್ಲಿ ವಿಜ್ಞಾನಿಗಳಾದ ಡಾ. ದರ್ಶನ್, ಡಾ. ಕೀರ್ತಿಶಂಕರ್, ಡಾ ಶಿವಪ್ಪನಾಯಕ ಹೆಚ್.ಬಿ, ಡಾ ಮನೋಜ್, ಡಾ. ಸತೀಶ್ ಹಾಗೂ ಕೇಂದ್ರದ ಸಿಬ್ಬಂದಿಗಳು ಭಾಗವಹಿಸಿದರು.

# ಪೂರ್ವ ಮುಂಗಾರು ತಾಂತ್ರಿಕ ಆಂದೋಲನಾ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ಕೃಷಿ ಸಂಶೋಧನ ಕೇಂದ್ರ, ಕುಣಿಗಲ್ ಮತ್ತು ಕೃಷಿ ಇಲಾಖೆ, ಕುಣಿಗಲ್ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 12 ಜೂನ್ 2024 ರ ಸೋಮವಾರ ದಂದು ಬೆಳ್ಳಗೆ 10.30 ಗಂಟೆಗೆ ಕುಣಿಗಲ್‌ನ ಶ್ರೀ ರಂಗಸ್ವಾಮಿ ಗುಡ್ಡ ಕಾವಲಿನಲ್ಲಿ ಇರುವ ಕೃಷಿ ಸಂಶೋಧನ ಕೇಂದ್ರದ ಆವರಣದಲ್ಲಿ ಪೂರ್ವ ಮುಂಗಾರು ತಾಂತ್ರಿಕ ಆಂದೋಲನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಡಾ.ಎಚ್.ಎಸ್. ಶಿವರಾಮು, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಪೂರ್ವ ಮುಂಗಾರು ಅಭಿಯಾನದ ಆಚರಣೆ ಕುರಿತು ರೈತರನ್ನುದ್ದೇಶಿಸಿ ಮಾತನಾಡಿದರು.

ಡಾ.ವಿ.ಗೋವಿಂದಗೌಡ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ, ತುಮಕೂರು ರವರು ಪೂರ್ವ ಮುಂಗಾರು ಅಭಿಯಾನವನ್ನು ಆಯೋಜಿಸುವ ಮಹತ್ವವನ್ನು ವಿವರಿಸಿದರು ಮತ್ತು ರೈತ ಸಮುದಾಯಕ್ಕೆ ಕೆವಿಕೆಯಿಂದ ಲಭ್ಯವಿರುವ ಪ್ರಯೋಜನಗಳನ್ನು ಪಡೆದುಕೊಳ್ಳಲು ಸೂಚಿಸಿದರು.

ತುಮಕೂರಿನ ಜಂಟಿ ಕೃಷಿ ನಿರ್ದೇಶಕ ಡಾ.ಎನ್.ರಮೇಶ್ ಅವರು ರೈತ ಸಂಪರ್ಕ ಕೇಂದ್ರದಿಂದ ರೈತ ಸಮುದಾಯಕ್ಕೆ ದೊರೆಯುವ ಸವಲತ್ತುಗಳ ಕುರಿತು ಸಭಿಕರನ್ನುದ್ದೇಶಿಸಿ ಮಾತನಾಡಿ, ಆರ್‌ಎಸ್‌ಕೆ ಅಡಿಯಲ್ಲಿ ನಡೆಯುತ್ತಿರುವ ಪ್ರಮುಖ ಕಾರ್ಯಕ್ರಮಗಳನ್ನು ವಿವರಿಸಿದರು.

ಡಾ.ಬಸವರಾಜು, ಸಹಾಯಕ. ಬೀಜ ಉತ್ಪಾದನಾ ಅಧಿಕಾರಿ, ಎನ್‌ಎಸ್‌ಪಿ., ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು ಅವರು ಮುಂಗಾರು ಹಂಗಾಮಿಗೆ ಸೂಕ್ತವಾದ ತಳಿಗಳ ಕುರಿತು ಅತಿಥಿ ಉಪನ್ಯಾಸವನ್ನು ನೀಡಿದರು ಮತ್ತು ಬೆಂಗಳೂರಿನ ಎನ್‌ಎಸ್‌ಪಿ.ನಲ್ಲಿ ಲಭ್ಯವಿರುವ ವಿವಿಧ ಸುಧಾರಿತ ಬೀಜಗಳ ಬಗ್ಗೆ ವಿವರಿಸಿದರು.

ತಿಪಟೂರಿನ ಕೃಷಿ ಸಂಶೋಧನಾ ಕೇಂದ್ರದ ಕೃಷಿ ಅಧೀಕ್ಷಕ ಡಾ.ಯೋಗೀಶ್, ಟಿ.ಎಸ್., ಮುಂಗಾರು ಪೂರ್ವ ಮತ್ತು ಖಾರಿಫ್ ಅವಧಿಯಲ್ಲಿ ಅನುಸರಿಸಬೇಕಾದ ಕೃಷಿ ಪದ್ಧತಿಗಳ ಕುರಿತು ಅತಿಥಿ ಉಪನ್ಯಾಸ ನೀಡಿ, ಏಕಗವಾಕ್ಷಿ ಬೆಳೆ ಕೈಗೆತ್ತಿಕೊಳ್ಳದೆ ದ್ವಿಗುಣ ಬೆಳೆ ಪದ್ಧತಿಗೆ ಮುಂದಾಗುವಂತೆ ಸಲಹೆ ನೀಡಿದರು.

ಕುಣಿಗಲ್‌ನ ಕೃಷಿ ಸಂಶೋಧನಾ ಕೇಂದ್ರದ ಕೃಷಿ ಅಧೀಕ್ಷಕ ಡಾ.ಶ್ರೀನಿವಾಸ್, ಕೆ.ಆರ್., ಕೃಷಿ ಬೆಳೆಗಳಲ್ಲಿನ ಸಮಗ್ರ ರೋಗ ಮತ್ತು ಕೀಟ ನಿರ್ವಹಣೆ ಕುರಿತು ಅತಿಥಿ ಉಪನ್ಯಾಸ ನೀಡಿ, ಎಆರ್‌ಎಸ್ ಕೇಂದ್ರದಲ್ಲಿ ಮುಂಗಾರು ಹಂಗಾಮಿಗೆ ಲಭ್ಯವಿರುವ ಕೃಷಿ ಒಳಹರಿವಿನ ಬಗ್ಗೆ ರೈತರಿಗೆ ಮಾಹಿತಿ ನೀಡಿದರು.

ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಡಾ.ಕೀರ್ತಿಕುಮಾರ್ ಕೆ ರವರು ಸುಸ್ಥಿರ ಸಾವಯವ ಕೃಷಿ ಕುರಿತು ಅತಿಥಿ ಉಪನ್ಯಾಸ ನೀಡಿ, ತೋಟಗಾರಿಕೆಯಲ್ಲಿ ಸಾವಯವ ಕೃಷಿ ಅಭ್ಯಾಸದ ತತ್ವಗಳು ಮತ್ತು ವಿಧಾನಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ತುರುವೇಕೆರೆ ಮತ್ತು ಕುಣಿಗಲ್ ಭಾಗದ 25 ರೈತರಿಗೆ ಡಿಎಫ್‌ಐ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ರೈತರಿಗಾಗಿ ಸುಧಾರಿತ ಬೀಜಗಳು, ಜೈವಿಕ ಗೊಬ್ಬರಗಳು, ನರ್ಸರಿ ಸಸಿಗಳು, ಕೀಟನಾಶಕಗಳು ಮತ್ತು ಕೀಟನಾಶಕಗಳ ಮಾರಾಟವನ್ನು ಆಯೋಜಿಸಲಾಗಿತ್ತು ಮತ್ತು ರೈತರ ಜಾಗೃತಿಯನ್ನು ಉತ್ಕೃಷ್ಟಗೊಳಿಸಲು ನವೀನ ಮತ್ತು ಸುಸ್ಥಿರ ಕೃಷಿ ತಂತ್ರಜ್ಞಾನಗಳ ಕುರಿತು ವಿವಿಧ ಕೃಷಿ ಉಪಕರಣಗಳು, ಪ್ರದರ್ಶನ ಸಾಮಗ್ರಿಗಳನ್ನು ಪ್ರದರ್ಶಿಸಲಾಯಿತು. ಈ ವೇಳೆ ರೈತರ ಪ್ರಶ್ನೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ರೈತ–ವಿಜ್ಞಾನಿ ಸಂವಾದ ಅಧಿವೇಶನ ನಡೆಸಲಾಯಿತು. ಒಟ್ಟು 257 ರೈತರು ಭಾಗವಹಿಸಿ ಪ್ರಯೋಜನ ಪಡೆದರು.

## ತೊಗರಿಯಲ್ಲಿ ಸೌರಚಾಲಿತ ಉಪಕರಣ ಬಳಸಿ ಕುಡಿ ಚಿವುಟುವಿಕೆ ತಂತ್ರಜ್ಞಾನದ ಪ್ರಾತ್ಯಕ್ಷಿಕೆ



ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ವತಿಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯ ಕೆಂಗಲಪುರ ಗ್ರಾಮದಲ್ಲಿ ದಿನಾಂಕ 10/06/2024 ರಂದಯ ತೊಗರಿಯಲ್ಲಿ ಸೌರಚಾಲಿತ ಉಪಕರಣ ಬಳಕೆಯಿಂದ ಕುಡಿ ಚಿವುಟುವ ತಂತ್ರಜ್ಞಾನ ಪ್ರದರ್ಶನದ ಮುಂಚೂಣಿ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಯಿತು.

ಕೆ.ವಿ.ಕೆ.ಯ ವಿಸ್ತರಣಾ ವಿಜ್ಞಾನಿಯಾದ ಡಾ ದರ್ಶನ್ ಮಾತನಾಡಿ ಜಿಲ್ಲೆಯಲ್ಲಿ ತೊಗರಿ ಮುಖ್ಯ ದ್ವಿದಳ ಧಾನ್ಯ ಬೆಳೆಯಾಗಿದ್ದು, ರೈತರು ಸೊರಗು ಹಾಗೂ ಬಂಜೆ ರೋಗಕ್ಕೆ ತುತ್ತಾಗುವ ತಳಿಯನ್ನು ಬೆಳೆಯುತ್ತಿದ್ದಾರೆ. ಬಿ.ಆರ್.ಜಿ. – 5 ತಳಿಯು ಪೂರ್ಣ ಪ್ರಮಾಣದ ಸೊರಗು ಹಾಗೂ ಅಲ್ಪ ಪ್ರಮಾಣದ ಬಂಜೆ ರೋಗ ನಿರೋದಕ ತಳಿಯಾಗಿದೆ. 160 – 170 ದಿನಗಳೊಳಗೆ ಅಧಿಕ ಇಳುವರಿಯನ್ನು ಪಡೆಯಬಹುದಾಗಿದೆ ಎಂದರು. ಮುಂದುವರೆದು ತೊಗರಿಯಲ್ಲಿ ಇಳುವರಿಯನ್ನು ಸುಧಾರಿಸಲು, ಬಿತ್ತನೆ ಮಾಡಿದ 45 ದಿನಗಳ ನಂತರ ಗಿಡದ ಕುಡಿಯನ್ನು ಚಿವುಟಿ ಹಾಕಲಾಗುತ್ತದೆ. ಇದರಿಂದ ಪಾರ್ಶ್ವದ ಕೊಂಬೆಗಳ ಬೆಳವಣಿಗೆಯಾಗಿ ಕಾಯಿಗಳ ಸಂಖ್ಯೆ ಹೆಚ್ಚಾಗುತ್ತದೆ. ಪ್ರಸ್ತುತ ಕೃಷಿ ಮಹಿಳೆಯರು ಈ ಚಟುವಟಿಕೆಯನ್ನು ಕುಳಿತು ಅಥವಾ ಬೆನ್ನು ಬಗ್ಗಿಸಿ ಕೈಗೊಳ್ಳುವುದರಿಂದ ದೇಹದ ಆಯಾಸ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಇದರ ಪರ್ಯಾಯವಾಗಿ ಸೌರ ಶಕ್ತಿ ಚಾಲಿತ ಉಪಕರಣವನ್ನು ರೈತರಿಗೆ ಪರಿಚಯಿಸುತ್ತಿದ್ದು, ಇದರಿಂದ 1 ಘಂಟೆಯೊಳಗೆ ಒಂದು ಎಕರೆ ತೊಗರಿ ಬೆಳೆಯ ಕುಡಿ ಚಿವುಟಬಹುದು ಎಂದರು.

ಈ ಸಂದರ್ಭದಲ್ಲಿ ಗಿಡಗಳ ಬೆಳವಣಿಗೆಯನ್ನು ಉತ್ತೇಜಿಸಲು ತೊಗರಿಯ ಬಿತ್ತನೆ ಬೀಜಕ್ಕೆ ಜೈವಿಕ ಗೊಬ್ಬರಗಳಿಂದ ಬೀಜೋಪಚಾರದ ಕುರಿತು ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಯಿತು.

### ಬೀಜೋಪಚಾರದ ವಿಧಾನ

ಬಿತ್ತನೆಗೆ ಮುಂಚೆ ಎಕರೆಗೆ 24 ಗ್ರಾಂ ಸೋಡಿಯಂ ಮಾಲಿಬ್ಡೇಟ್‌ಅನ್ನು ಮಡಿಕೆ ಅಥವಾ ಪ್ಲಾಸ್ಟಿಕ್ ಪಾತ್ರೆಯಲ್ಲಿ ತೆಗೆದುಕೊಂಡು 70 ಮಿ.ಲಿ. ಬೆಲ್ಲದ ದ್ರಾವಣದಲ್ಲಿ ಕರಗಿಸಿ, ಬಂದಂತಹ ಮಿಶ್ರಣದಲ್ಲಿ ಎಕರೆಗೆ ಬೇಕಾದ 5 – 6 ಕೆ.ಜಿ. ಬಿತ್ತನೆ ಬೀಜವನ್ನು ಬೆರಸಿ, 200 ಗ್ರಾಂ ರೈಜೋಬಿಯಂ ಹಾಗೂ 200 ಗ್ರಾಂ ರಂಜಕ ಕರಗಿಸುವ ಜೀವಾಣುಗಳ ಲೇಪನ ಮಾಡಿ ನೆರಳಿನಲ್ಲಿ ಒಣಸಿಸಬೇಕು.

ಕಾರ್ಯಕ್ರಮದ ಕೊನೆಯಲ್ಲಿ ನೆರೆದಿದ್ದ ರೈತರಿಗೆ ತೊಗರಿ ಬಿತ್ತನೆ ಬೀಜ ಹಾಗೂ ಬೀಜೋಪಚಾರಕ್ಕಾಗಿ ಜೈವಿಕ ಗೊಬ್ಬರಗಳನ್ನು ವಿತರಿಸಲಾಯಿತು.

## ತರಬೇತಿ ಕಾರ್ಯಕ್ರಮಗಳು

### ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ತಾರಸಿ ತೋಟದ ಮಹತ್ವ | 22/04/2024 | 36 |
| 2 | ಮಣ್ಣು ಮತ್ತು ಜಲ ಸಂರಕ್ಷಣಾ ಪದ್ಧತಿಗಳು, ಅಂತರ್ಜಲ ಮರುಪೂರಣ | 03/05/2024 | 50 |
| 3 | ಮೇವಿನ ಬೆಳೆ ಉತ್ಪಾದನಾ ತಾಂತ್ರಿಕತೆಗಳು | 14/06/2024 | 30 |
| 4 | ಮಣ್ಣು ಮಾದರಿ, ಮಣ್ಣು ಪರೀಕ್ಷೆ ಮತ್ತು ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರಗಳ ಬಳಕೆ | 15/06/2024 | 36 |

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 5 | ಮಣ್ಣು ಮಾದರಿ, ಮಣ್ಣು ಪರೀಕ್ಷೆ ಮತ್ತು ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರಗಳ ಬಳಕೆ | 20/06/2024 | 36 |
| 6 | ಮಣ್ಣು ಮಾದರಿ, ಮಣ್ಣು ಪರೀಕ್ಷೆ ಮತ್ತು ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರಗಳ ಬಳಕೆ | 28/06/2024 | 36 |
| 7 | ಸಮಗ್ರ ಕೃಷಿ ಪದ್ಧತಿಯಲ್ಲಿ ಹೈನುಗಾರಿಕೆಯ ಪಾತ್ರ | 10–11/06/2024 | 27 |
| 8 | ಸಮಗ್ರ ಕೃಷಿ ಪದ್ಧತಿಯಲ್ಲಿ ಹಿತ್ತಲಲ್ಲಿ ಕೋಳಿ ಸಾಕಣೆ ಪಾತ್ರ | 12–13/06/2024 | 30 |

## ಹೊರ ಅವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಭತ್ತದ ಬೀಜೋಪಚಾರ ಮತ್ತು ಬೇಸಾಯ ಪದ್ಧತಿಗಳು | ಬೆನಾಯಕನಹಳ್ಳಿ | 21/06/2024 | 20 |
| 2 | ಹರಳು ಬೆಳೆಯ ಬೇಸಾಯ ಪದ್ಧತಿಗಳು ಮತ್ತು ಕುಡಿ ಚುವುಟುವಿಕೆ | ಚಿಕ್ಕಬಿದರೆ | 25/06/2024 | 25 |
| 3 | ಹಾಲಿನ ಇಳುವರಿಯ ಹೆಚ್ಚಿಸಲು ತೆಂಗಿನ ತೋಟದಲ್ಲಿ ಅಂತರ ಬೆಳೆಯಾಗಿ ದ್ವಿದಳ ಧಾನ್ಯ ಮೇವಿನ ಬೆಳೆ | ಕರೀಕೆರೆ | 26/06/2024 | 12 |
| 4 | ಜನ ಸ್ಪಂದನ ಕಾರ್ಯಕ್ರಮ | ನೊಣವಿನಕೆರೆ | 27/06/2024 | 200 |
| 5 | ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ಕೆಂಗಲಾಪುರ | 10/06/2024 | 84 |
| 6 | ತೊಗರಿಯಲ್ಲಿ ಹವಾಮಾನ ಸಹಿಷ್ಣ ತಂತ್ರಜ್ಞಾನ | ಕಮಲಾಪುರ | 13/06/2024 | 35 |
| 7 | ತೊಗರಿಯಲ್ಲಿ ಬೀಜೋಪಚಾರ ಮತ್ತು ಸುಧಾರಿತ ಉತ್ಪಾದನಾ ಪದ್ಧತಿಗಳು | ಭೋವಿನಹಳ್ಳಿ | 14/06/2024 | 30 |
| 8 | ದ್ವಿದಳ ಧಾನ್ಯ ಬೇಸಾಯದ ಪ್ರಾಮುಖ್ಯತೆ ಮತ್ತು ತೊಗರಿಯ ಸುಧಾರಿತ ಬೇಸಾಯ ಪದ್ಧತಿಗಳು | ಇಪ್ಪಾಡಿ | 14/06/2024 | 35 |
| 9 | ತಿಂಗಳ ಅವರೆ ಉತ್ಪಾದನಾ ತಂತ್ರಜ್ಞಾನ | ದೇವಿಹಳ್ಳಿ | 28/06/2024 | 18 |

## ಪ್ರಾಯೋಜಿತ ತರಬೇತಿಗಳು

| ಕ್ರ.ಸಂ. | ವಿಷಯ | ದಿನಾಂಕ | ಒಟ್ಟು |
|---|---|---|---|
| 1 | ಇಂಧನ ದಕ್ಷತೆ, ಕೃಷಿ ಪಂಪ್ ಸೆಟ್ ಮತ್ತು ನೀರಿನ ಸಂರಕ್ಷಣೆ | 03/05/2024 | 56 |
| 2 | ಇಂಧನ ದಕ್ಷತೆ, ಕೃಷಿ ಪಂಪ್ ಸೆಟ್ ಮತ್ತು ನೀರಿನ ಸಂರಕ್ಷಣೆ | 07/05/2024 | 54 |
| 3 | ಕೃಷಿ ಸಖಿಯರಿಗೆ ನೈಸರ್ಗಿಕ ಕೃಷಿ ಬಗ್ಗೆ ತರಬೇತಿ | 18/06/2024 ರಿಂದ 22/06/2024 ರವರೆಗೆ | 34 |
| 4 | ಕೃಷಿ ಸಖಿಯರಿಗೆ ನೈಸರ್ಗಿಕ ಕೃಷಿ ಬಗ್ಗೆ ತರಬೇತಿ | 25/06/2024 ರಿಂದ 29/06/2024 ರವರೆಗೆ | 34 |

## ಪ್ರಮುಖ ದಿನಗಳು / ಕಾರ್ಯಕ್ರಮಗಳು ಹಾಗೂ ಕ್ಷೇತ್ರೋತ್ಸವಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಪರಿಕರಗಳ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಗಳಲ್ಲಿ (DAESI) ಡಿಪ್ಲೊಮಾ ಪದವಿ ದಿನ | ಕೆ.ವಿ.ಕೆ., ಕೊನೇಹಳ್ಳಿ | 29/05/2024 | 100 |
| 2 | ವಿಶ್ವ ಪರಿಸರ ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 05/06/2024 | 84 |
| 3 | ಪೂರ್ವ ಮುಂಗಾರು ಅಭಿಯಾನ | ಕೃಷಿ ಸಂಶೋಧನಾ ಕೇಂದ್ರ, ಕುಣಿಗಲ್ | 12/06/2024 | 258 |
| 4 | ಕೆವಿಕೆಯಲ್ಲಿ ಪ್ರಧಾನಮಂತ್ರಿ ಕಿಸ್ಸಾನ್ ಸಮ್ಮಾನ ನಿಧಿಯ 17ನೇ ಕಂತು ನೇರಪ್ರಸಾರ | ಕೆ.ವಿ.ಕೆ., ಕೊನೇಹಳ್ಳಿ | 17/06/2024 | 71 |
| 5 | ಅಂತರಾಷ್ಟ್ರೀಯ ಯೋಗ ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 21/06/2024 | 64 |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ

| ಕ್ರ. ಸಂ. | ದಿನಾಂಕ | ಸ್ಥಳ | ವಿಷಯ | ರೈತರ ಸಂಖ್ಯೆ |
|---|---|---|---|---|
| 1 | 27/04/2024 | ನೊಣವಿನಕೆರೆ | ಡ್ರೋಣ್ ಬಳಸಿ ಭತ್ತಕ್ಕೆ ಪೋಷಕಾಂಶ ಸಿಂಪಡಣೆ | 12 |
| 2 | 06/04/2024 | ಸಿದ್ದಾಪುರ | ನುಗ್ಗೆಯಲ್ಲಿ ಪೋಷಕಾಂಶಗಳ ನಿರ್ವಹಣೆ | 11 |
| 3 | 25/04/2024 | ಕುಣಿಗಲ್ | ಇಳುವರಿ ಕೊಡದ ಪೇರಲದ ತೋಟ | 09 |
| 4 | 11/05/2024 | ಗುಬ್ಬಿ | ಬಾಳೆಯಲ್ಲಿ ಪನಾಮ ಸೊರಗು ರೋಗ | 09 |
| 5 | 18/05/2024 | ವಿಟ್ಲಾಪುರ | ದಾಳಿಂಬೆ ತಾಕಿನಲ್ಲಿ ಕಾಯಿ ಉದುರುವಿಕೆ | 11 |
| 6 | 21/05/2024 | ಗೌಡನಕಟ್ಟೆ | ತೆಂಗಿನ ತೋಟದಲ್ಲಿ ಪೋಷಕಾಂಶಗಳ ಕೊರತೆ | 10 |
| 7 | 23/05/2024 | ಬೇನೇನಹಳ್ಳಿ | ಮಾವಿನ ಕಾಯಿ ಉದುರುವುದು ಮತ್ತು ಆಂಥ್ರಾಕ್ನೋಸ್ ಸಮಸ್ಯೆ | 08 |
| 8 | 26/06/2024 | ಚಿಕ್ಕಹೊನ್ನವಳ್ಳಿ | ತೆಂಗಿನ ತೋಟದಲ್ಲಿ ಪೋಷಕಾಂಶಗಳ ಕೊರತೆ | 06 |


## ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,
ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,
ತಿಪಟೂರು, ತುಮಕೂರು ಜಿಲ್ಲೆ